ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(14)

ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಪಾ.ಅ/ಯ.ವ/ಆ.ಅ/ 14 /24-25

ಕಾರ್ಯಪಾಲಕ ಅಭಿಯಂತರು(ವಿ)ರವರ ಕಛೇರಿ
ಬೃ.ಬೆಂ.ಮ.ಪಾ, ಯಲಹಂಕ ವಲಯ
ಬಳ್ಳಾರಿ ರಸ್ತೆ, ಬೆಂಗಳೂರು-೨೭.
ದಿನಾಂಕ: 27-09-2024

ಆಡಳಿತಾತ್ಮಕ ಮಂಜೂರಾತಿ

ವಿಷಯ:- Operation and Maintenance of street light fittings in Vidyaranyapura ward no.13 Package Y-13 of Yelahanka Zone for the Period (10 Months).

ಉಲ್ಲೇಖ:- 1. ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/21-22, ದಿನಾಂಕ:27-07-2021 ರ ಮೇರೆಗೆ

2. ಅಂದಾಜು ಮೊತ್ತ: **ರೂ.೩೩.೬೦ ಲಕ್ಷಗಳು**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಯಲಹಂಕ ವಲಯರವರು ಈ ಮೇಲಿನ ಕಾಮಗಾರಿಗೆ 2024-25 ನೇ ಸಾಲಿನ ಅಯವ್ಯಯದ ಲೆಕ್ಕ ಶಿರ್ಷಿಕೆ-**P0300** ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಯಲಹಂಕ ವಲಯ ವಿದ್ಯುತ್ ವಿಭಾಗಕ್ಕೆ 2024-25 ನೇ ಸಾಲಿನ ಪಿ.ಓ.ಡಬ್ಲ್ಯೂ ಅನುದಾನದಡಿಯಲ್ಲಿ ಬೀದಿದೀಪಗಳ ನಿರ್ವಹಣೆಯ ಕಾಮಗಾರಿಗೆ ಕೆ.ಪಿ.ಡಬ್ಲ್ಯೂಡಿ. 2023-24 ವಿದ್ಯುತ್ (ಎಸ್.ಆರ್) ದರಗಳ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿದೆ. ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು 2024-25 ನೇ ಸಾಲಿನ ವಿದ್ಯುತ್ ಕ್ರಿಯಾ ಯೋಜನೆಯನ್ನು ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:11-09-2024 ರ ನಡವಳಿಗಳ ವಿಷಯ ಸಂಖ್ಯೆ:167/24-25 ರಲ್ಲಿ ಅನುಮೋದಿಸಿರುವ ಮೇರೆಗೆ ತಮ್ಮ ಅವಗಾಹನೆಗೆ ತರುತ್ತಾ, ಮಾನ್ಯ ಮುಖ್ಯ ಆಯುಕ್ತರುರವರ ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಉಲ್ಲೇಖ (01) ರಂತೆ ನೀಡಿರುವ ಅಧಿಕಾರದನ್ವಯ ಉಲ್ಲೇಖ (01) ರಂತೆ ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರು ತಾತ್ವಿಕ ಅನುಮೋದನೆ ನೀಡಿರುವ ಮೇರೆಗೆ ಈ ಮೇಲಿನ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯ ಮೆಮೋ ಪ್ರತಿಗೆ ಸಹಿಯನ್ನು ಮಾಡಿದೆ.

ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ- 140/141 ಕ್ರಮಸಂಖ್ಯೆ: 14 ರಲ್ಲಿ ನಮೂದಿಸಲಾಗಿದೆ.

ಈ ಮೇಲ್ಕಂಡ ಅಂದಾಜುಪಟ್ಟಿಗೆ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಯೊಂದಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಷರತ್ತುಗಳು:-

1. ಅಂದಾಜು ಪಟ್ಟಿಯ ಮೊತ್ತ ರೂ.1.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ಲಾಗ್ ಪುಸ್ತಕದಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ದಾಖಲೆ ರೂಪದಲ್ಲಿ ನಮೂದಿಸಿಕೊಳ್ಳುವುದು.
3. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೇಟಾ ದರವನ್ನು ತಯಾರಿಸಿ, ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಬೃ.ಬೆಂ.ಮ.ಪಾ. ಯಲಹಂಕ ವಲಯ

ಪ್ರತಿಯನ್ನು:

1. ಅಧೀಕ್ಷಕ ಅಭಿಯಂತರರು(ವಿ) ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಛೇರಿ ಕಡತಕ್ಕೆ.